ಶ್ರೀ ಎಚ್. ಆರ್. ಕೇಶವಮೂರ್ತಿ.—ಸ್ವಾಮಿ, ಈ ತರದ ತೊಂದರೆಗಳು ಇಲ್ಲದಂತೆ ಮಾಡಲು ವಾಣೀವಿಲಾಸಸಾಗರದಿಂದ ನೀರನ್ನು ಡೈವರ್ಟ್ ಮಾಡುವುದಕ್ಕೆ ತಾವು ಏನಾದರೂ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಾ ?

ಶ್ರೀ ಎಸ್. ನಿಜಲಿಂಗಪ್ಪ (ಮುಖ್ಯಮಂತ್ರಿಗಳು).—ಅದು ಅಷ್ಟು ಸುಲಭವಾದ ಕೆಲಸವಲ್ಲ. ಮೊದಲು ಇದಕ್ಕೆ 5 ಕೋಟಿ ರೂಪಾಯಿಗಳ ಅಂದಾಜು ಇದ್ದದ್ದು ಈಗ 8 ಕೋಟಿ ರೂಪಾಯಿಗಳಿಗೆ ಬಂದಿದೆ. ಒಂದು ವ್ಯಾಲಿಯಿಂದ ಇನ್ನೊಂದುವ್ಯಾಲಿಗೆ ನೀರನ್ನು ಡೈವರ್ಟ್ ಮಾಡತಕ್ಕಂಥದ್ದು ಅಷ್ಟು ಸುಲಭವಾದ ಕೆಲಸವಲ್ಲ. ಅಂದರೆ ಇನ್ನು 4—5 ವರ್ಷಗಳಾದರೂ ಆಗಬಹುದು.

ಶ್ರೀ ಬಿ. ಎಲ್. ಗೌಡ.—ಸ್ವಾಮಿ, ಈ ಅನಧಿಕೃತವಾಗಿ ಪಂಪುಸೆಟ್ಟುಗಳನ್ನು ಹಾಕಿಕೊಂಡಿರುವವರಿಗೆ ಪೈರು ಒಣಗದಂತೆ ಸ್ವಲ್ಪವಾದರೂ ನೀರನ್ನು ಒದಗಿಸಲು ಭರವಸೆ ಕೊಡುತ್ತೀರಾ ?

ಶ್ರೀ ಅಲೂರು ಹನುಮಂತಪ್ಪ.—ಈಗ ಒಂದು ಹೊಸ ನೀತಿಯನ್ನು ಹಾಕಿಕೊಂಡಿದ್ದೇವೆ. ಅವರಲ್ಲಿರುವ ನೀರನ್ನು ಉಪಯೋಗಿಸಲು ಸ್ವಲ್ಪ ಕಂಜೈರ್ ಮಾಡುತ್ತೇವೆ. ಆದ್ದರಿಂದ ಅವರ ಪೈರಿಗೆ ಅಷ್ಟೇನೂ ನಷ್ಟವಾಗುವುದಿಲ್ಲವೆಂದು ನಂಬಿದ್ದೇನೆ.

ಅಧ್ಯಕ್ಷರು.—ಶ್ರೀ ಎಸ್. ಎ. ವಾಸನ್ನಶೆಟ್ಟಿಯವರ ಪರವಾಗಿ ಶ್ರೀ ಎಚ್. ಆರ್. ಕೇಶವ ಮೂರ್ತಿಯವರು ಪ್ರಶ್ನೆ ಹಾಕಬಹುದು.

Timber Smuggling Cases.

*Q.—44. Sri H. R. KASHAVA MURTHY (Gandasi) [On behalf of SRI S. A. VASANNA SETTY (Saklespur)].—

Will the Government be pleased to state :—

(*a*) the total number of timber smuggling cases componded by Saklespur Forest Range Office and the total amount collected as fine for the past 3 years ;

(*b*) whether it is a fact that there are no forest check posts between Sukravarsanthe—Kattaya Road to Mysore ;

(*c*) whether any representation has been made to Government by the Department to have a check post on this road as lot of timber is smuggled in that area ?

A.—Sri B. RACHAIAH (Minister for Forests and Fisheries).—

(*a*) *Year*		*No.*		*Amount*	
				Rs.	P.
1962–63	...	41	...	6,525	96
1963–64	...	42	...	4,823	28
1964–65	...	33	...	4,734	56

(*b*) Yes.

(*c*) No.

ಶ್ರೀ ಎಚ್. ಆರ್. ಕೇಶವಮೂರ್ತಿ.—ಸಾಮಾನ್ಯವಾಗಿ ಗಂಧದಮರ ಮತ್ತು ಚಾಬೀನೆ ಕಳ್ಳ ಸಾಗಾಣಿಕೆಯಾಗುತ್ತಿದ್ದರೂ ಇದು ಇರಾಬೆಯವರಿಗೆ ಗೊತ್ತಿದ್ದರೂ ನಮ ಏತಕ್ಕೋಸ್ಕರ ಅದನ್ನು ತಡೆಗಟ್ಟಲು ಅಲ್ಲಿ ಚೆಕ್‌ಪೋಸ್ಟ್ ಹಾಕಿಲ್ಲ, ದಯವಿಟ್ಟು ತಿಳಿಸಬೇಕು ?

†ಶ್ರೀ ಬಿ. ರಾಚಯ್ಯ.—ಈ ವಿಚಾರವನ್ನು ನಾನು ಒಪ್ಪುವುದಿಲ್ಲ. ಹಾಸನ ಜಿಲ್ಲೆಯಲ್ಲ ಕಳ್ಳತನ ತಪ್ಪಿಸುವುದಕ್ಕೆ 6 ಕಡೆಗಳಲ್ಲಿ ತನಿಖಾ ಠಾಣೆಗಳನ್ನು ಹಾಕಿದ್ದೇವೆ. ಅಲ್ಲದೆ ಶಿರಹಟ್ಟಿಯ ಹತ್ತಿರ ಒಂದನ್ನು ಹಾಕುವುದಕ್ಕೆ ಪ್ರಪೋಸಲ್ ಕೇಳಿದ್ದೇವೆ.

ಶ್ರೀ ಚೆನ್ನಬೈರೇಗೌಡ.—120 ಪ್ರಕರಣಗಳನ್ನು ಬಿಟ್ಟುಬಿಟ್ಟಿದ್ದೀರಿ. ಅವುಗಳ ಬಗ್ಗೆ ಏಕೆ ಪ್ರಾಸಿಕ್ಯೂಷನ್ ನಡೆಸಿಲ್ಲ ?

ಶ್ರೀ ಬಿ. ರಾಚಯ್ಯ.—ಸಾಬೆ, ಟಿಂಬರ್ ಮುಂತಾದ ಸಣ್ಣಪುಟ್ಟ ಪ್ರಕರಣಗಳನ್ನು ಬಿಟ್ಟು ದೊಡ್ಡದೊಡ್ಡ ಪ್ರಕರಣಗಳ ಬಗ್ಗೆ ಪ್ರಾಸಿಕ್ಯೂಟ್ ಮಾಡಿದ್ದೇವೆ.

ಶ್ರೀ ಎಚ್. ಆರ್. ಕೇಶವಮೂರ್ತಿ.—ಕೆಲವರು ಚೌಬೀನೆ, ಗಂಧದಮರ, ಮತ್ತು ಬೆಲೆ ಬಾಳುವ ಮರಗಳನ್ನು ಲಾರಿಗಳಲ್ಲಿ ಕಳ್ಳತನದಲ್ಲಿ ಸಾಗಿಸಿ, ಒಂದೊಂದು ಲಾರಿಗೆ 50 ಸಾವಿರ ರೂಪಾಯಿಗಳವರೆಗೆ ಮಾರಿ ಲಕ್ಷಗಟ್ಟಲೆ ಸಂಪಾದನೆಮಾಡಿರುವುದು ನಿಜವೇ, ಸ್ವಾಮಿ ?

ಶ್ರೀ ಬಿ. ರಾಚಯ್ಯ.—ಕಳ್ಳತನದ ಪ್ರಸಂಗಗಳ ಮೇಲೆ ಕ್ರಮಗಳನ್ನು ಸಾಕಷ್ಟು ತೆಗೆದು ಕೊಂಡಿದ್ದೇವೆ. ಅಲ್ಲದೆ ಕಳ್ಳತನದ ಪ್ರಸಂಗಗಳು ಸರ್ಕಾರದ ಗಮನಕ್ಕೆ ಬಂದಾಗಲೆಲ್ಲಾ ಸೂಕ್ತ ಕ್ರಮಗಳನ್ನು ತಕ್ಷಣ ತೆಗೆದುಕೊಳ್ಳುತ್ತಿದ್ದೇವೆ. ಎಲ್ಲಿಯವರೆಗೆ ಕಳ್ಳರು ಇರುತ್ತಾರೋ ಅಲ್ಲಿಯ ವರೆಗೆ ಇಂಥ ಪ್ರಸಂಗಗಳು ನಡೆಯುವುದು ಸ್ವಾಬಾವಿಕ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—1962-63ನೇ ಸಾಲಿನಲ್ಲಿ ಚೌಬೀನೆ ಕಳ್ಳಸಾಗಾಣಿಕೆ ಪ್ರಕರಣದಲ್ಲಿ 6,525-96 ರೂಪಾಯಿಗಳು ವಸೂಲಾಗಿದೆಯೆಂದು ಹೇಳಿದೆ. ಇದಕ್ಕೆ ತಾವು ಏನಾದರೂ ಪರವಾನೆ ಕೊಟ್ಟಿದ್ದೀರ ?

ಶ್ರೀ ಬಿ. ರಾಚಯ್ಯ.—ಸಾಬೆ ಮತ್ತು ಇತರೇ ಮರಗಳನ್ನು ತರುವುದಕ್ಕೆ ಪರವಾನೆ ಕೊಟ್ಟಿತ್ತು, ಚೌಬೀನೆ ಮತ್ತು ಗಂಧದಮರಗಳಂಥ ಬೆಲೆಬಾಳುವ ಮರಗಳನ್ನು ತರಲು ಪರವಾನೆ ಕೊಟ್ಟಿರಲಿಲ್ಲ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಎಷ್ಟು ರೂಪಾಯಿಗಳ ಮರಗಳು ಕಳ್ಳಸಾಗಾಣಿಕೆಯಾಗಿದೆ ?

ಶ್ರೀ ಬಿ. ರಾಚಯ್ಯ.—ಕೆಲವು ಸಂದರ್ಭಗಳಲ್ಲಿ ಸಾವಿರಾರು ರೂಪಾಯಿಗಳ ಮರಗಳು ಕಳ್ಳ ಸಾಗಾಣಿಕೆಯಾಗಿದೆ.

Mr. SPEAKER.—I put Question No. 217.

Societies registered for the Construction of Houses for Harijans.

*೪.—217. Smt. B. L. SUBBAMMA (Chickmagalur).—

Will the Government be pleased to state :—

(*a*) the number of societies registered for the construction of houses to Harijans and Girijans in Chickmagalur District ;

(*b*) the amount provided to the said societies during the last 3 years.

(*c*) whether they are aware that the construction of houses to Harijans and Girijans in this District has not been taken up so far ;

(*d*) whether they would take action to get this work executed early ?

A.—Sri K. PUTTASWAMY (Minister for Co-operation and Housing).—

(*a*) Six.
(*b*) Nil.
(*c*) Yes.
(*d*) Yes.